# ಬದುಕಿನ ಸಾರ್ಥಕತೆ 'ಅಂಗಾಂಗ ದಾನ'




ಸಾವಿಗೊಳಗಾಗುವ ಜೀವವನ್ನು ಉಳಿಸಿಕೊಳ್ಳುವುದು ಸಾಧ್ಯವಿಲ್ಲ. ಆದರೆ, ಸಾವಿಗೊಳಗಾದ ವ್ಯಕ್ತಿಯ ದೇಹದಿಂದ ಅಂಗಾಂಗಗಳನ್ನು ಪಡೆಯುವ ಮೂಲಕ ಜೀವನ್ಮರಣದೊಂದಿಗೆ ಸೆಣಸುತ್ತಿರುವ ಕೆಲವರನ್ನು ಉಳಿಸುವುದು ಸಾಧ್ಯವಿದೆ. ಹಾಗಾಗಿಯೇ, ಮೆದುಳು ನಿಷ್ಕ್ರಿಯಗೊಂಡು ಸಾವಿಗೊಳಗಾಗುವ ವ್ಯಕ್ತಿಗಳ ಅಂಗಾಂಗ ದಾನಕ್ಕೆ ವೈದ್ಯರು ಶಿಫಾರಸು ಮಾಡುತ್ತಾರೆ. ಹೃದಯ, ಕಿಡ್ನಿ, ಶ್ವಾಸಕೋಶ, ಪಿತ್ತಜನಕಾಂಗ, ಕಣ್ಣು ಸೇರಿದಂತೆ ಮನುಷ್ಯ ದೇಹದ ವಿವಿಧ ಅಂಗಗಳನ್ನು ಮತ್ತೊಬ್ಬರಿಗೆ ಕಸಿ ಮಾಡಲು ಸಾಧ್ಯವಿದೆ. ಮೆದುಳು ನಿಷ್ಕ್ರಿಯಗೊಂಡ ನಂತರವೂ ಕೆಲ ಕಾಲ ಜೀವಂತವಾಗಿರುವ ಈ ಅಂಗಗಳನ್ನು ಮತ್ತೊಬ್ಬರಿಗೆ ಕಸಿ ಮಾಡಬಹುದು. ಅಂಗಾಂಗ ದಾನ ಎನ್ನುವುದು ಸಾವಿಗೀಡಾದ ವ್ಯಕ್ತಿಯ ಬದುಕಿನ ಬಹು ದೊಡ್ಡ ಸಾರ್ಥಕತೆ ಮಾತ್ರವಲ್ಲದೆ, ಹಲವರ ಉಳಿವಿಗೆ ಕಾರಣವಾಗುವ ಮಾನವೀಯ ಮಾರ್ಗವೂ ಹೌದು. ಅಂಗಾಂಗ ದಾನ ಮಾಡಿದ ಸಂಚಾರಿ ವಿಜಯ್, ಕಣ್ಣುಗಳನ್ನು ದಾನ ಮಾಡಿದ ಪುನೀತ್ ರಾಜ್‌ಕುಮಾರ್ ಅವರಂಥ ಸೆಲೆಬ್ರಿಟಿಗಳ ಮೂಲಕ ಅಂಗಾಂಗ ದಾನದ ಬಗ್ಗೆ ಸಮಾಜದಲ್ಲಿ ಜಾಗೃತಿ ಮೂಡುತ್ತಿದ್ದರೂ, ಅಂಗಾಂಗಗಳ ಲಭ್ಯತೆ ಹಾಗೂ ನಿರೀಕ್ಷೆಯಲ್ಲಿರುವವರ ಸಂಖ್ಯೆಯ ನಡುವಿನ ಅಂತರ ಹೆಚ್ಚುತ್ತಲೇ ಇದೆ.

■ ಉಮಾ ಅನಂತ್